## GOVERNMENT OF KARNATAKA

No. RD 158 TNR 2020

Karnataka Government Secretariat,
MS Building,
Bengaluru, Dated: 28-06-2021

## ORDER

**Subject:** Special surveillance measures for persons arriving from Maharashtra-reg.

**Reference:**
1. Circular No. HFW 52 ACS 2021, Dated 16.2.2021
2. Addendum No. HFW 52 ACS 2021, dated 20.2.2021
3. Circular No. HFW 58 ACS 2021, dated 20.2.2021
4. Circular No. HFW 84 ACS 2021, dated 22.3.2021
5. Proceedings of 112th meeting of State COVID 19 TAC, Dated: 20.6.2021

*********

**Whereas,** the State of Maharashtra continues to be threatened with spread of COVID 19 virus. Further, INSACOG (a consortium of laboratories for whole Genome sequencing in the context of COVID 19 pandemic) has intimated that Delta Plus variant of COVID 19 virus, which is currently a Variant of Concern (VOC), has been reported in certain districts of Maharashtra.

**Whereas,** the State Government is satisfied that prevailing COVID 19 situation in the Maharashtra, neighbouring State, entails taking special surveillance measures to prevent the spread into the bordering districts of the state.

**Now, therefore,** in exercise of the powers conferred under the sub section (l) of Section 24 of the Disaster Management Act, 2005, the undersigned, in the capacity of the Chairman, State Executive Committee, directs taking special surveillance measures, as below, for persons arriving from Maharashtra, with immediate effect, for strict implementation by Chief Commissioner BBMP, Police Commissioners, Deputy Commissioners, Superintendents of Police, and other Heads of Departments and Authorities.

(i) Negative RT-PCR certificate not older than 72 hours or vaccination certificate of at least one dose of COVID 19 vaccine shall be compulsorily produced by the passengers coming to Karnataka by flight, bus, train, taxi, personal transport, etc. This will **also** be applicable for all the flights originating **from Maharashtra to Karnataka**.

(ii) Airlines shall issue boarding passes only to the passengers carrying RT-PCR negative certificate not older than 72 hours or vaccination certificate of at-least one dose of COVID 19 vaccine.

(iii) Railway Authorities shall be responsible for ensuring that all passengers travelling by trains carry negative RT-PCR certificates not older than 72 hours or vaccination certificate of at least one dose of COVID 19 vaccine.

(iv) For all the passengers travelling by bus, the bus conductor shall ensure that they possess RT-PCR negative certificates not older than 72 hours or vaccination certificate of at least one dose of COVID 19 vaccine.

(v) Deputy Commissioners of the Districts bordering Maharashtra State, i.e., Belagavi, Bidar, Vijayapura & Kalaburagi shall make arrangements to deploy necessary staff at Checkposts to ensure that all the vehicles entering Karnataka are checked for the compliance of the above requirement.

Further, for short term travelers and students the guidelines will be applicable as mentioned in Reference 1 and 3.

Permitted exemptions for negative RT-PCR certificate are as follows:

a) Vaccination certificate of having received at least one dose of COVID 19 vaccine.
b) Constitutional functionaries and health care professionals.
c) Children below 2 years.
d) In dire emergency situation (death in the family, medical treatment etc.,) - the passenger's swab shall be collected on arrival in Karnataka with necessary details like phone number, address etc., duly verifying from his ID card. On receipt of the RT-PCR test report, further action will be taken as per the State protocol.

Any person violating these measures will be liable to be proceeded against as per the relevant provisions of the Karnataka Epidemic Diseases Act 2020, Disaster Management Act, 2005, besides legal action under relevant section of IPC, and other legal provisions as applicable.

**(P Ravi Kumar)**
Chief Secretary and Chairman,
State Executive Committee

To:
The Compiler, Karnataka Gazette, Bengaluru

**ಕರ್ನಾಟಕ ಸರ್ಕಾರ**

ಸಂಖ್ಯೆ: ಕಂಇ 158 ಟಿಎನ್‌ಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:28-06-2021.

# ಆದೇಶ

ವಿಷಯ: ಮಹಾರಾಷ್ಟ್ರದಿಂದ ಆಗಮಿಸುವ ವ್ಯಕ್ತಿಗಳ ಕುರಿತು ವಿಶೇಷ ಕಣ್ಗಾವಲು ಕ್ರಮಗಳನ್ನು ಅನುಸರಿಸುವ ಬಗ್ಗೆ.

ಉಲ್ಲೇಖ:
1. ಸುತ್ತೋಲೆ ಸಂಖ್ಯೆ: 52 ACS 2021, ದಿನಾಂಕ:16.2.2021.
2. ಸೇರ್ಪಡೆ ಆದೇಶ ಸಂಖ್ಯೆ: HFW 52 ACS 2021, ದಿನಾಂಕ: 20.2.2021.
3. ಸುತ್ತೋಲೆ ಸಂಖ್ಯೆ: HFW 58 ACS 2021, ದಿನಾಂಕ: 20.2.2021
4. ಸುತ್ತೋಲೆ ಸಂಖ್ಯೆ: HFW 84 ACS 2021, ದಿನಾಂಕ: 22.3.2021
5. ಕೋವಿಡ್ 19 ರಾಜ್ಯ ತಾಂತ್ರಿಕ ಸಲಹಾ ಸಮಿತಿಯ 112ನೇ ಸಭೆಯ ನಡಾವಳಿಗಳು, ದಿನಾಂಕ:20.6.2021.

* * * * *

ನೆರೆಯ ಮಹಾರಾಷ್ಟ್ರ ರಾಜ್ಯದಲ್ಲಿ ಕೋವಿಡ್-19 ವೈರಾಣು ಸೋಂಕಿನ ಪ್ರಕರಣಗಳು ಹೆಚ್ಚುತ್ತಿರುವುದು ವರದಿಯಾಗುತ್ತಿದೆ. ಅಲ್ಲದೆ, INSACOG (Indian SARS-CoV-2 Genomics Consortium)- ಕೋವಿಡ್-19 ಸಾಂಕ್ರಾಮಿಕದ ಸಂದರ್ಭದಲ್ಲಿ ಸಂಪೂರ್ಣ ಜೀನೋಮ್ ಅನುಕ್ರಮಣಿಕೆಯ ಪ್ರಯೋಗಾಲಯಗಳ ಒಕ್ಕೂಟವು- COVID-19 ವೈರಸ್‌ನ ಡೆಲ್ಟಾ ಪ್ಲಸ್ ರೂಪಾಂತರವು ಪ್ರಸ್ತುತ ಮಹಾರಾಷ್ಟ್ರದ ಕೆಲವು ಜಿಲ್ಲೆಗಳಲ್ಲಿ ವರದಿಯಾಗಿದೆ ಎಂದು ತಿಳಿಸಿರುತ್ತದೆ.

ಪ್ರಸ್ತುತ, ರಾಜ್ಯ ಸರ್ಕಾರವು ಮಹಾರಾಷ್ಟ್ರ ರಾಜ್ಯದಲ್ಲಿನ ಕೋವಿಡ್-19 ಪರಿಸ್ಥಿತಿಯನ್ನು ಅವಲೋಕಿಸಿ, ಮಹಾರಾಷ್ಟ್ರ ರಾಜ್ಯಕ್ಕೆ ಹೊಂದಿಕೊಂಡಿರುವ ಕರ್ನಾಟಕದ ಜಿಲ್ಲೆಗಳಲ್ಲಿ ವಿಶೇಷ ಕಣ್ಗಾವಲು ಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯಗತ್ಯವಾಗಿರುತ್ತದೆ.

ಆದ್ದರಿಂದ, ವಿಪತ್ತು ನಿರ್ವಹಣಾ ಅಧಿನಿಯಮ, 2005ರ ಸೆಕ್ಷನ್ (24)ರ ಉಪಪ್ರಕರಣ (ಎಲ್) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ರಾಜ್ಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷನಾಗಿ ಈ ಕೆಳಗೆ ಸಹಿ ಮಾಡಿರುವ ನಾನು ಮಹಾರಾಷ್ಟ್ರ ರಾಜ್ಯದಿಂದ ಆಗಮಿಸುವ ವ್ಯಕ್ತಿಗಳ ಕುರಿತಂತೆ ಈ ಕೆಳಕಂಡ ವಿಶೇಷ ಕಣ್ಗಾವಲು ಕ್ರಮಗಳನ್ನು ಜಾರಿಗೊಳಿಸಿ ಆದೇಶಿಸಿರುತ್ತೇನೆ. ಈ ಆದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಆಯುಕ್ತರು, ಪೊಲೀಸ್ ಆಯುಕ್ತರು, ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು, ಇಲಾಖಾ ಮುಖ್ಯಸ್ಥರುಗಳು ಮತ್ತು ಪ್ರಾಧಿಕಾರಗಳು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸತಕ್ಕದ್ದು.

(i) ವಿಮಾನ, ರೈಲು, ಬಸ್ಸು, ಟ್ಯಾಕ್ಸಿ, ಸ್ವಂತ ವಾಹನ ಇತ್ಯಾದಿಗಳ ಮೂಲಕ ಕರ್ನಾಟಕಕ್ಕೆ ಆಗಮಿಸುವ ಪ್ರಯಾಣಿಕರು 72 ಗಂಟೆಗಳ ಒಳಗೆ ಮಾಡಿಸಿರುವ ಆರ್.ಟಿ-ಪಿ.ಸಿ.ಆರ್ ನೆಗೆಟಿವ್ ಪರೀಕ್ಷೆಯ ವರದಿ ಅಥವಾ ಕನಿಷ್ಠ ಒಂದು ಡೋಸ್ ಕೋವಿಡ್-19 ಲಸಿಕೆ ಪಡೆದಿರುವ ಕುರಿತು ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು. ಇದು ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಆಗಮಿಸುವ ಎಲ್ಲಾ ವಿಮಾನಯಾನಗಳಿಗೂ ಅನ್ವಯವಾಗುತ್ತದೆ.

(ii) ವಿಮಾನಯಾನ ಸಂಸ್ಥೆಗಳು 72 ಗಂಟೆಗಳ ಒಳಗೆ ಮಾಡಿಸಿದ ಆರ್.ಟಿ-ಪಿಸಿಆರ್ ನೆಗೆಟಿವ್ ಪರೀಕ್ಷೆಯ ವರದಿಯನ್ನು ಅಥವಾ ಕನಿಷ್ಠ ಒಂದು ಡೋಸ್ ಕೋವಿಡ್-19 ಲಸಿಕೆ ಪಡೆದಿರುವ ಕುರಿತು ಪ್ರಮಾಣ ಪತ್ರವನ್ನು ಹೊಂದಿರುವ ಪ್ರಯಾಣಿಕರಿಗೆ ಮಾತ್ರವೇ ಬೋರ್ಡಿಂಗ್ ಪಾಸ್ ನೀಡತಕ್ಕದ್ದು.

(iii) ರೈಲ್ವೆ ಪ್ರಾಧಿಕಾರವು ರೈಲಿನಲ್ಲಿ ಪ್ರಯಾಣಿಸುವ ಎಲ್ಲಾ ಪ್ರಯಾಣಿಕರು ಆರ್.ಟಿ-ಪಿಸಿಆರ್ ನೆಗೆಟಿವ್ ಪರೀಕ್ಷೆಯ ವರದಿಯನ್ನು ಅಥವಾ ಕನಿಷ್ಠ ಒಂದು ಡೋಸ್ ಕೋವಿಡ್-19 ಲಸಿಕೆ ಪಡೆದಿರುವ ಕುರಿತು ಪ್ರಮಾಣ ಪತ್ರ ಹೊಂದಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

...2

(iv) ಬಸ್ಸುಗಳ ಮೂಲಕ ಪ್ರಯಾಣಿಸುವವರು ಆರ್.ಟಿ-ಪಿಸಿಆರ್ ನೆಗೆಟಿವ್ ಪರಿಕ್ಷಾ ವರದಿಯನ್ನು ಅಥವಾ ಕನಿಷ್ಠ ಒಂದು ಡೋಸ್ ಕೋವಿಡ್-19 ಲಸಿಕೆ ಪಡೆದಿರುವ ಕುರಿತು ಪ್ರಮಾಣ ಪತ್ರ ಹೊಂದಿರುವುದನ್ನು ಆಯಾ ಬಸ್‌ನ ನಿರ್ವಾಹಕರು (bus conductor) ಖಚಿತಪಡಿಸಿಕೊಳ್ಳತಕ್ಕದ್ದು.

(v) ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವ ಕರ್ನಾಟಕದ ಗಡಿ ಜಿಲ್ಲೆಗಳಾದ ಬೆಳಗಾವಿ, ಬೀದರ್, ವಿಜಯಪುರ ಹಾಗೂ ಕಲಬುರಗಿ ಜಿಲ್ಲೆಗಳ ಮೂಲಕ ರಾಜ್ಯಕ್ಕೆ ಪ್ರವೇಶಿಸುವ ವಾಹನಗಳಿಗೆ (ಚಾಲಕರು/ಸಹಾಯಕರು/ಪ್ರಯಾಣಿಕರು) ಮೇಲೆ ತಿಳಿಸಿರುವ ನಿಯಮಗಳ ಅನುಪಾಲನೆಗೆ ಚೆಕ್ ಪೋಸ್ಟ್ ಗಳಲ್ಲಿ ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸಿ, ಸೂಕ್ತ ವ್ಯವಸ್ಥೆಯನ್ನು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಕಲ್ಪಿಸತಕ್ಕದ್ದು.

ಮುಂದುವರೆದು, ಅಲ್ಪಾವಧಿಗೆ ಕರ್ನಾಟಕಕ್ಕೆ ಭೇಟಿ ನೀಡುವವರು ಹಾಗೂ ವಿದ್ಯಾರ್ಥಿಗಳಿಗೆ ಉಲ್ಲೇಖ (1) ಮತ್ತು (3) ರ ಸುತ್ತೋಲೆಯಲ್ಲಿ ತಿಳಿಸಿರುವ ಮಾರ್ಗಸೂಚಿಗಳು ಅನ್ವಯಿಸುತ್ತವೆ.

ಈ ಕೆಳಕಂಡ ಪ್ರಕರಣಗಳಿಗೆ ಆರ್.ಟಿ-ಪಿಸಿಆರ್ ನೆಗೆಟಿವ್ ಟೆಸ್ಟ್ ವರದಿ ಹೊಂದುವುದರಿಂದ ವಿನಾಯಿತಿ ನೀಡಲಾಗಿದೆ.

(i) ಕನಿಷ್ಠ ಒಂದು ಡೋಸ್ ಕೋವಿಡ್-19 ಲಸಿಕೆ ಪಡೆದಿರುವ ಕುರಿತು ಪ್ರಮಾಣ ಪತ್ರವನ್ನು ಹೊಂದಿರುವವರು.

(ii) ಸಾಂವಿಧಾನಿಕ ಕಾರ್ಯಕಾರಿಗಳು (Constitutional functionaries) ಮತ್ತು ವೈದ್ಯಕೀಯ ಸಿಬ್ಬಂದಿಗಳು.

(iii) ಎರಡು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು

(iv) ಮಹಾರಾಷ್ಟ್ರದಿಂದ ತುರ್ತು ಸಂದರ್ಭಗಳಲ್ಲಿ (ಕುಟುಂಬದಲ್ಲಿ ಮರಣ ಸಂಭವಿಸಿದ ಪಕ್ಷದಲ್ಲಿ, ವೈದ್ಯಕೀಯ ಚಿಕಿತ್ಸೆ, ಇತ್ಯಾದಿ) ಕರ್ನಾಟಕಕ್ಕೆ ಆಗಮಿಸುವ ಪ್ರಯಾಣಿಕರ ಸ್ವಾಬ್ ಮಾದರಿಗಳನ್ನು ಪರೀಕ್ಷೆಗಾಗಿ ಕರ್ನಾಟಕದಲ್ಲಿಯೇ ಸಂಗ್ರಹಿಸತಕ್ಕದ್ದು. ಸದರಿ ಪ್ರಯಾಣಿಕರ ಹೆಸರು, ವಿಳಾಸ, ಸಂಪರ್ಕ ಸಂಖ್ಯೆ, ಇತ್ಯಾದಿ ಪೂರ್ಣ ವಿವರಗಳನ್ನು ಗುರುತಿನ ಚೀಟಿಯ ಆಧಾರದ ಅನ್ವಯ ಪಡೆಯತಕ್ಕದ್ದು ಮತ್ತು ಆರ್.ಟಿ-ಪಿಸಿಆರ್ ಪರೀಕ್ಷೆಯ ವರದಿಯ ಆಧಾರದ ಮೇಲೆ ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಶಿಷ್ಟಾಚಾರದಂತೆ ಕ್ರಮ ಕೈಗೊಳ್ಳತಕ್ಕದ್ದು.

ಈ ಕ್ರಮಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯು, ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮ, 2020, ವಿಪತ್ತು ನಿರ್ವಹಣಾ ಕಾಯ್ದೆ, 2005 ಮತ್ತು ಭಾರತ ದಂಡ ಸಂಹಿತೆಯಡಿ ಅನ್ವಯವಾಗಬಹುದಾದ ಕಾನೂನು ಕ್ರಮಗಳು ಮತ್ತು ಇತರ ಕಾನೂನು ಉಪಬಂಧಗಳಡಿಯಲ್ಲಿನ ಕಾನೂನು ಕ್ರಮಗಳಿಗೆ ಒಳಪಡುತ್ತಾರೆ.

**(ಪಿ. ರವಿಕುಮಾರ್)**
ಮುಖ್ಯ ಕಾರ್ಯದರ್ಶಿ ಹಾಗೂ ಅಧ್ಯಕ್ಷರು
ರಾಜ್ಯ ಕಾರ್ಯಕಾರಿ ಸಮಿತಿ.

**ಇವರಿಗೆ:**
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.